ಮುಖ್ಯವಾದ ನಿರ್ಣಾಯಕ ಅಂಶಗಳ ಮೇಲೆ ಮುಸುಕಿನದಂಥದ್ದೊಂದು ಕವಿದುಬಿಡುವುದು.

ಅಂದರೆ ಪದುಮಣ್ಣನಿಗೆ ಕೆಲಸವೊಂದನ್ನು ವಹಿಸಲಾಗಿದೆಯೆಂದುಕೊಳ್ಳಿ. ಮೂವತ್ತೈದು ಕಿಲೋಮೀಟರ್ ಬಸ್ಸಿನಲ್ಲಿ ಪ್ರಯಾಣ ಮಾಡಿ, ಆಮೇಲೆ ಲಾಂಚು ಹತ್ತಿ ದ್ವೀಪದಂತಹ ಹಳ್ಳಿಗೆ ಹೋಗಿ ಭಾಗವತರನ್ನು ಭೆಟ್ಟಿಯಾಗಿ ತನ್ನನ್ನು ಇಂಥಿಂಥವರು ಕಳಿಸಿದ್ದಾರೆಂದೂ, ಇಷ್ಟನೇ ತಾರೀಖಿಗೆ, ಇಂಥ ಊರಲ್ಲಿರುವ, ಇಂಥ ಪ್ರಸಂಗಕ್ಕೆ ನೀವು ಬರಲಾಗುತ್ತದೆಯೇ ಎಂದು ವಿಚಾರಿಸಿಕೊಂಡು ಆಮೇಲೆ ಅವರಲ್ಲಿಯೇ ಊಟ ಮಾಡಿ, ರಾತ್ರಿಯಾದರೆ ಮಲಗಿಕೊಂಡು, ಬೆಳಗ್ಗೆ ಎದ್ದು ಅವರ ಕಾಲಿಗೆ ಬಿದ್ದು, ಆಶೀರ್ವಾದ ಪಡೆದು ಮತ್ತೆ ಲಾಂಚು, ಬಸ್ಸು ಎಲ್ಲಾ ಹಿಡಿದು ಊರು ಸೇರುತ್ತಾನೆ. ಕಳಿಸಿದವರಿಗೆ ತನ್ನ ಪ್ರಯಾಣದ ವಿವರವಾದ ಕಥೆಯನ್ನು ಇಡೀ ದಿನ ಬೇಕಾದರೆ ಹೇಳುತ್ತಾನೆ. ‘ಕಡಿಗೆ ಭಾಗವತರು ಬರ್ತೇನೆ ಅಂದ್ರಾ? ಇಲ್ಲಾ ಅಂದ್ರಾ?’ ಎಂಬ ಬೀಜ ವಾಕ್ಯದ ಪ್ರಶ್ನೆ ಬಂದೊಡನೆ ಅವನ ತಲೆ ಗೊಂದಲದ ಗೂಡಾಗುತ್ತದೆ. ಹತ್ತಿದ ಬಸ್ಸಿನ ನಂಬರಿನಿಂದ ಹಿಡಿದು, ಪಕ್ಕ ಕೂತವನ ಶರ್ಟು ಬಣ್ಣದಿಂದ ಹಿಡಿದು, ಕಂಡಕ್ಟರನ ಬೆವರು ನಾತದಿಂದ ಹಿಡಿದು ಏನೇನು ನೆನಪಿಲ್ಲ ಹೇಳಿ ಅವನಿಗೆ? ಭಾಗವತರ ಮನೆಯ ಅಂಗಳದ ಹೂಗಿಡದ ಎತ್ತರ, ಬಣ್ಣ ಸಹ ಹೇಳಬಲ್ಲ, ರಾತ್ರಿ ಮಲಗಿದ ಮೇಲ್ಮೆತ್ತಿನ ಗೋಡೆಯ ಗಿಲಾಯಿ ಎಲ್ಲೆಲ್ಲಿ ಕಿತ್ತಿ ಯಾವ್ಯಾವ ಆಕಾರದ ಚಿತ್ರವಾಗಿದೆ ಅಂತ ಕೇಳಿದರೂ ಹೇಳಬಲ್ಲ. ಆದರೆ ಈ ಬೀಜರೂಪಿ ಪ್ರಶ್ನೆ ಮಾತ್ರ ಅವನಿಗೆ ಭಯಂಕರ ಘಟಸರ್ಪದಂತೆ ಹೆದೆಯಾಡಿಸುತ್ತದೆ. ಹೀಗಾದದ್ದು ಒಂದೆರಡು ಬಾರಿಯಲ್ಲ. ಪ್ರತಿ ವಿಷಯದಲ್ಲಿಯೂ ಮೂಲ ಬೀಜರೂಪಿ ವಿಷಯದಲ್ಲಿ ವಿಸ್ಮರಣೆಯುಂಟಾಗುವುದು ಹಾಗೂ ಉಳಿದೆಲ್ಲ ವಿವರಗಳು ರಸವತ್ತಾಗಿ ನೆನಪುಳಿಯುವುದು ಮಾಮೂಲಾಗಿಬಿಟ್ಟಿತು. ಆತನ ವೃತ್ತಿಗೆ ಸಂಬಂಧಿಸಿದಂತೆ ಹಿಯರಿಂಗ್ ದಿನಾಂಕ ಮರೆತು ಹೋಗುತ್ತಿತ್ತು. ಹೆಂಡತಿಯ ಹುಟ್ಟಿದ ದಿನ, ಮದುವೆ ವಾರ್ಷಿಕ ದಿನ ಮರೆತು ಬೈಸಿಕೊಂಡು ಅವುಗಳನ್ನು ನೆನಪಿಡುವ ಗಡಿಬಿಡಿಯಲ್ಲಿ ಕೇಸಿನ ವಿಚಾರಣೆ ದಿನಾಂಕ ಮರೆಯುತ್ತಿದ್ದ. ಯಾವ ದಿನ ಯಾರ ವಿಚಾರಣೆಯಿದೆಯೆಂದು ಮರೆಯುತ್ತಿತ್ತು. ಲೋಕ ಅದಾಲತ್ ಇದೆಯೆಂದು ನಸುಕಿಗೇ ಎದ್ದು ತಯಾರಾಗಿ ಹೋಗುತ್ತಿದ್ದ. ಆದರೆ ಯಾವ ಕೇಸಿದೆಯೆಂದು ನೆನಪಾಗದೆ ಗಲಿಬಿಲಿಯಾಗುತ್ತಿದ್ದ. ಅವನ ಹಳ್ಳಿಯ ಸುತ್ತ ಮುತ್ತ ನಾಕೈದು ಊರುಗಳಲ್ಲಿ ಕೋರ್ಟುಗಳಿದ್ದ ನಿಮಿತ್ತ ಬೇರೆ ಬೇರೆ ಕಕ್ಷಿದಾರರ ಕೇಸುಗಳು ಬೇರೆ ಬೇರೆ ಕಡೆ ಇರುತ್ತಿದ್ದವು. ದೊಡ್ಡ ದೊಡ್ಡ ಪುಸ್ತಕಗಳನ್ನು ತೆಗೆದು ಓದಿ ಪ್ರತಿ ಕೇಸಿಗೂ ಕೂಡ ಅದ್ಭುತವಾದ ರೆಫರೆನ್ಸುಗಳನ್ನಿಟ್ಟು ವಾದ ತಯಾರು ಮಾಡುತ್ತಿದ್ದ. ಆದರೆ, ಯಾವ ದಿನ, ಯಾವ ಊರಿನ ನ್ಯಾಯಾಲಯದಲ್ಲಿ, ಯಾವ ಕೇಸಿಗೆ ಹಾಜರಾಗಬೇಕೆಂದು ನಿರ್ಣಯಿಸಲಾರದೆ ಗೊಂದಲಗೊಳ್ಳುತ್ತಿದ್ದ.

ಪದುಮಣ್ಣನ ಮರೆವಿನ ರೋಗ ಅವನ ಮೆದುಳಿನ ಸಮಸ್ಯೆಯೋ ಅಥವಾ ಸಾವಿರಾರು ಕೆಲಸಗಳನ್ನು ಒಟ್ಟೊಟ್ಟಿಗೆ ಯೋಚಿಸುವ ಅವನ ಕಾರ್ಯಬಾಹುಳ್ಯತೆಯಿಂದ ಹುಟ್ಟಿದ ತೊಂದರೆಯೋ ಅಥವಾ ಸದಾ ಬೈಯುತ್ತಲೇ ಇರುವ ಅವನ ಹೆಂಡತಿಯ ಪಿರಿಪಿರಿಯಿಂದ ಉಂಟಾಗಿರುವ ಖಿನ್ನತೆಯೋ ಎಂದು ತೀರ್ಮಾನಿಸುವಲ್ಲಿ ಮನೋವೈದ್ಯರೂ ಸೋತರು. ‘ನೀವು ನಿಮ್ಮ ಜೀವನಶೈಲಿ ಬದಲಿಸಿಕೊಳ್ಳಿ’ ಎಂದು ಸಲಹೆ ಕೊಟ್ಟರು. ‘ಸಾರಿ ಸರ್’ ಅಂದ. ‘ನಿಮ್ಮ ವೈಫ್ ಬದಲಾಯಿಸಿ’ ಎನ್ನಲಿಕ್ಕೆ ಡಾಕ್ಟರ್ ಮಹಾಶಯರಿಗೆ ಧೈರ್ಯವಾಗಲಿಲ್ಲ. ಏಕೆಂದರೆ ನಾಗಕ್ಕ ಹುಲಿಯಂತೆ ಬದಿಗೇ ನಿಂತಿದ್ದಳು. ತಣ್ಣಗಾದ ಡಾಕ್ಟರ್ ಗುಳಿಗೆ ಬರೆದು ಚೀಟಿ ಕೈಲಿಟ್ಟು ಕಳಿಸಿಬಿಟ್ಟರು. ಈ ಸಮಯದಲ್ಲಿಯೇ ಪದುಮಣ್ಣನಿಗೆ ಹಿತೈಷಿಗಳೊಬ್ಬರು ಅಸಿಸ್ಟಂಟ್ ಇಟ್ಟುಕೊಳ್ಳಲು ಸಲಹೆ ಕೊಟ್ಟಿದ್ದು, ಹಾಗೂ ಪುತ್ತಣ್ಣನ ಮಗಳು, ಆಗಷ್ಟೇ ಎಲ್‌ಎಲ್‌ಬಿ ಮುಗಿಸಿದ ವಲ್ಲರಿ ಅವನ ಜ್ಯೂನಿಯರ್ ಆಗಿ ಸೇರಿಕೊಂಡಿದ್ದು. ವಲ್ಲರಿ ಭಾರಿ ಜೋರಿನ ಹುಡುಗಿ. ಆದರೆ ಕೆಲಸದಲ್ಲಿ ಮಹಾ ಚುರುಕು. ಅವಳ ಅಪ್ಪ ಪುತ್ತಣ್ಣನದೊಂದು ಸಣ್ಣ ಅಂಗಡಿ. ನಾಲ್ಕು ಹುಡುಗಿಯರಲ್ಲಿ ವಲ್ಲರಿಯೇ ದೊಡ್ಡವಳು. ಅವಳು ಜ್ಯೂನಿಯರ್ ಆಗಿ ಸೇರಿಕೊಂಡ ಮೇಲೆ ಪದುಮಣ್ಣನಿಗೆ ಕಾಲಕಾಲಕ್ಕೆ ಕೇಸು ನಡೆಸುವುದು